ವಿಜಯಮ್ಮ ಮಂಚದ ಮೇಲೆ ಕಾಲು ಚಾಚಿಕೊಂಡು ಹಾಗೇ ದಿಂಬಿಗೊರಗಿ ಕುಳಿತಿದ್ದರು. ಪ್ರಭಾಕರರಾಯರು ಮಲಗುತ್ತಿದ್ದ ಜಾಗ ಖಾಲಿಯಾಗಿತ್ತು. ಅವರು ನಿತ್ಯ ಈ ಹೊತ್ತಿನಲ್ಲಿ ಎದ್ದು ವಾಕಿಂಗ್ ಹೋಗುವ ಅಭ್ಯಾಸ ಇರಿಸಿಕೊಂಡಿದ್ದರು. ಅಪೂರ್ವ ವಿಜಯಮ್ಮನ ಕಾಲ ಬಳಿ ಕುಳಿತು ಆತಂಕದಿಂದ, 'ಏನಾಯ್ತು ಆಂಟಿ..? ನೀವು ಆರೋಗ್ಯವಾಗಿದ್ದೀರಾ ತಾನೇ..?' ಎಂದು ಕಕ್ಕುಲತೆಯಿಂದ ವಿಚಾರಿಸಿದಳು.

ವಿಜಯಮ್ಮನ ಮುಖ ನಿಸ್ತೇಜವಾಗಿತ್ತು. ರಾತ್ರಿಯಿಡೀ ಮಲಗದಿರುವುದಕ್ಕೆ ಸಾಕ್ಷಿಯಾಗಿ ಅವರ ಕಂಗಳು ಕೆಂಪಡರಿ ಹೋಗಿದ್ದವು. ಮುಖದಲ್ಲಿ ಯಾವುದೋ ಚಿಂತೆ, ದುಗುಡ ಹೆಪ್ಪುಗಟ್ಟಿತ್ತು. ಕೂದಲು ಕೆದರಿ ಮುಖದಲ್ಲಿ ನಿರಾಸಕ್ತಿ ಎದ್ದು ಕಾಣುತ್ತಿತ್ತು. ವಿಜಯಮ್ಮನ ಈ ಮನಸ್ಥಿತಿ ಇಂದು ನಿನ್ನೆಯದಲ್ಲ ಎಂದು ಅಪೂರ್ವ ಬಲ್ಲಳು. ಕೆಲವೊಮ್ಮೆ ವಿಜಯಮ್ಮ ಮಾತು, ನಗೆ ಎಲ್ಲಾ ಮರೆತು ಹೀಗೇ ಕೈ ಚೆಲ್ಲಿ, ಏನೋ ಗೀಳು ಹತ್ತಿಸಿಕೊಂಡಂತೆ ಕುಳಿತುಕೊಳ್ಳುವುದಿದೆ. ಕಂಬನಿಯ ಕೋಡಿ ಹರಿಸುವುದಿದೆ. ಎದೆಯಲ್ಲಿ ಸುಡುವ ಯಾವುದೋ ಚಿಂತೆ ಅವರನ್ನು ಒಳಗೇ ದಹಿಸುತ್ತಿತ್ತು. ನಿಡುಸುಯ್ಯುವ ಬಿಸಿಯುಸಿರಿನ ಹಿಂದೆ ಯಾವುದೋ ನೋವು ಮಡುಗಟ್ಟಿದೆ ಎಂದು ಅಪೂರ್ವ, ತಾನು ಬಂದ ಈ ಮೂರುವರೆ ವರ್ಷಗಳಲ್ಲಿ ಅರ್ಥ ಮಾಡಿಕೊಂಡಿದ್ದಳು. ಆದರೆ ಆ ಮನೆಯವರ ವೈಯುಕ್ತಿಕ ವಿಷಯವನ್ನು ಹೊರಗಿನವಳಾದ ತಾನು, ಕೆದಕಿ ಕೇಳುವ ಅರ್ಹತೆ ಪಡೆದಿಲ್ಲ ಮತ್ತು ಸೌಜನ್ಯವೂ ಅಲ್ಲ ಎಂಬ ಕಾರಣಕ್ಕೆ ಅವಳು ಅಸಹಾಯಕಳಂತೆ ನೋಡುತ್ತ ಕುಳಿತುಬಿಡುತ್ತಿದ್ದಳು. ತನ್ನ ಎಲ್ಲೆಯನ್ನು ಮೀರಿ ಅವಳೆಂದೂ ನಡೆದುಕೊಂಡಿದ್ದಿಲ್ಲ.

ವಸುಮತಿ ಚಿಕ್ಕಮ್ಮನ ಆಸರೆಯಲ್ಲಿ ಶಿವಮೊಗ್ಗದ ಬಳಿ ಹಳ್ಳಿಯಲ್ಲಿ ಬೆಳೆದವಳು. ಅಪೂರ್ವ ಕಲಿಕೆಯಲ್ಲಿ ಸದಾ ಮುಂದಿರುತ್ತಿದ್ದಳು. ಸಾಧಾರಣ ಸಂಪಾದನೆಯಿದ್ದ ವಸುಮತಿಯ ಗಂಡ ಶಂಕರನಿಗೆ, ಪತ್ನಿ ತನ್ನ ಅಕ್ಕನ ಮಗಳನ್ನು ತಮ್ಮೊಂದಿಗೆ ತಂದು ಸಾಕಿಕೊಳ್ಳುತ್ತಿದ್ದದ್ದು ಸರ್ವಥಾ ಇಷ್ಟವಿರಲಿಲ್ಲ. ತಮ್ಮ ಸಂಪಾದನೆಯಲ್ಲಿ ಬಹಳ ಹಿತಮಿತವಾಗಿ ಸಂಸಾರ ನಿರ್ವಹಿಸಿಕೊಳ್ಳಬೇಕಾಗಿದ್ದ ಅನಿವಾರ್ಯತೆ ಇರುವಾಗ, ಮತ್ತೊಂದು ಜೀವ ತಂದು ಸಾಕಿಕೊಳ್ಳುವ ಜವಾಬ್ದಾರಿ ಸುಲಭದ ಮಾತಾಗಿರಲಿಲ್ಲ. ಕಡೆಗೆ ವಸುಮತಿಯ ಹಠವೇ ಗೆದ್ದಿತ್ತು. ಅಲ್ಲದೆ, ಅಪೂರ್ವ ಉದರ ಪೋಷಣೆ ಮತ್ತು ಕಲಿಕೆಗೆಂದು ವಸುಮತಿ ಯಾರೊಂದಿಗೋ ಮಾತನಾಡಿ ಪ್ರತಿ ತಿಂಗಳು ಅಪೂರ್ವಳ ಉಳಿತಾಯ ಖಾತೆಗೆ ಹಣ ತರಿಸಿಕೊಳ್ಳುವ ಏರ್ಪಾಟು ಮಾಡಿದ ಬಳಿಕವೇ ಶಂಕರ ತೆಪ್ಪಗಾಗಿದ್ದ. ಅಪೂರ್ವಳ ಹೆಸರಿಗೆ ಬರುತ್ತಿದ್ದ ಹಣವನ್ನು ಬಕಪಕ್ಷಿಯಂತೆ ಕಾದು, ಶಂಕರ ಅದನ್ನು ಮನೆ ಖರ್ಚಿಗೆ ಬಳಸುತ್ತಿದ್ದ. ಹಾಗಾಗಿ ಅಪೂರ್ವಳನ್ನು ಮೂದಲಿಸುವುದನ್ನು ಬಿಟ್ಟು ಅವಳನ್ನು ಜತನದಿಂದ ನೋಡಿಕೊಳ್ಳಲಾರಂಭಿಸಿದ್ದ. ನಾದಿನಿಯ ಮಗಳೆಂಬ ಮಮಕಾರಕ್ಕಿಂತಲೂ, 'ಚಿನ್ನದ ಮೊಟ್ಟೆಯಿಡುವ ಬಾತುಕೋಳಿ' ಎಂಬಂತೆ ಶಂಕರ ಅವಳನ್ನು ಕಂಡಿದ್ದ. ಅಪೂರ್ವಳ ಖಾತೆಗೆ ಬರುತ್ತಿದ್ದ ಹಣ ಎಲ್ಲಿಂದ, ಯಾರು ಕಳಿಸುತ್ತಿದ್ದರು ಎನ್ನುವ ಸತ್ಯ ವಸುಮತಿ ಎಂದೂ ಕೂಡಾ ಶಂಕರನ ಮುಂದೆ ಬಾಯ್ಬಿಟ್ಟಿರಲ್ಲಿಲ್ಲ. ಶಂಕರನಿಗೂ ಅದನ್ನು ತಿಳಿದುಕೊಳ್ಳುವ ಆಸಕ್ತಿ ಇರಲಿಲ್ಲ.

'ಅಪೂರ್ವ ಬೆಳೀತಿದ್ದಾಳೆ.. ಅವ್ಳಿಗೆ ಖರ್ಚು ಇರುವ ದುಡ್ಡು ಸಾಲ್ತಾ ಇಲ್ಲ...ಸ್ವಲ್ಪ ಜಾಸ್ತಿ ಕಳಿಸಲು ಹೇಳು..' ಶಂಕರ ದುಂಬಾಲು ಬೀಳುತ್ತಿದ್ದ.

'ನಾಚಿಕೆಯಾಗ್ಬೇಕು ನಿನ್ನ ಜನ್ಮಕ್ಕೆ..ನಮ್ಗೇ ಮತ್ತೊಂದು ಮಗಳಿದ್ದಿದ್ರೆ ನಾವು ಸಾಕ್ತಾ ಇರಲಿಲ್ವಾ..? ಇನ್ನೊಬ್ರ ಹಣಕ್ಕೆ ಅವಲಂಬಿಸ್ತಾ ಇದ್ವಾ ಹೇಳಿ..? ತಂದೆ ತಾಯಿ ಇಲ್ಲದ ಅನಾಥ ಕೂಸು. ಅವ್ಳನ್ನು ನೋಡಿಕೊಳ್ತಾ ಇರೋದ್ರಿಂದ ನಮ್ಗೇನೂ ಬಡತನ ಬರಲ್ಲ. ಅವ್ಳ ಹಣಕ್ಕೆ ಕಣ್ಣು ಹಾಕೋ ಬದಲು ಸಂಪಾದನೆಗೆ ಬೇರೆ ಮಾರ್ಗ ಹುಡುಕಿ..' ಶಂಕರನನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದ ವಸುಮತಿ ಅಪೂರ್ವಳ ಹಿತ ಚಿಂತಕಿಯಾಗಿ, ಒತ್ತಾಸೆಯಾಗಿ ನಿಲ್ಲುತ್ತಿದ್ದಳು. ಆ ಮನೆಯಲ್ಲಿ ತನ್ನ ಪರಿಸ್ಥಿತಿಯ ಅರಿವಿದ್ದ ಅಪೂರ್ವ ಸೂಕ್ಷ್ಮಗ್ರಾಹಿಯಾಗಿ, ಅಂತರ್ಮುಖಿಯಾಗಿ ಬೆಳೆದಿದ್ದಳು. ತನ್ನ ನೋವು, ಭಾವನೆಗಳನ್ನು ಎಂದೂ ಬಿಚ್ಚಿಡದ ಆಕೆ ತನ್ನ ಓದು ಬರಹಗಳಲ್ಲಿಯೇ ಮನಸ್ಸನ್ನು ಕೇಂದ್ರೀಕರಿಸಿಕೊಂಡು ಬೆಳೆದಳು. ಪಿ.ಯು.ಸಿ.ಯಲ್ಲಿ ಶೇಕಡಾ ತೊಂಬತ್ತಾರು ಅಂಕಗಳೊಂದಿಗೆ ಪಾಸು ಮಾಡಿದ ಅವಳು ಕಾಲೇಜಿಗೆ ಹೆಚ್ಚಿನ ಅಂಕಗಳನ್ನು ತಂದುಕೊಟ್ಟ ವಿದ್ಯಾರ್ಥಿನಿಯಾಗಿ ಹೊರಹೊಮ್ಮಿ ಕೀರ್ತಿ ತಂದಿದ್ದಳು. ಆ ಕಾಲೇಜಿನ ಪ್ರಾಂಶುಪಾಲರ ಮಾರ್ಗದರ್ಶನದಲ್ಲೇ ಸಿ.ಇ.ಟಿ. ಪರೀಕ್ಷೆ ಕೂಡಾ ಬರೆದು ಅದರಲ್ಲೂ ಆರು ನೂರ ಸಮೀಪದ ರ‍್ಯಾಂಕ್ ಗಳಿಸಿದ್ದಳು. ಆದರೆ ಅವಳನ್ನು ಮುಂದೆ ಕಲಿಸುವ ಚೈತನ್ಯ ವಸುಮತಿಗಿರಲಿಲ್ಲ. ವಸುಮತಿಯನ್ನು ಕಾಲೇಜಿಗೆ ಕರೆಸಿಕೊಂಡ ಪ್ರಾಂಶುಪಾಲರು ಅಪೂರ್ವಳ ಮುಂದಿನ ವಿದ್ಯಾಭ್ಯಾಸದ ಬಗ್ಗೆ ವಿಚಾರಿಸಿದಾಗ, ವಸುಮತಿ ಅಪೂರ್ವಳಂಥ ಪ್ರತಿಭಾವಂತ ವಿದ್ಯಾರ್ಥಿನಿಯ ಭವಿಷ್ಯವನ್ನು ಬಡತನದ ಬೇಗೆಗೆ ಬಲಿ ಕೊಡಬಾರದೆಂದು ನಿರ್ಧಾರಕ್ಕೆ ಬಂದಿದ್ದರು. ಮರುದಿನ ಬೆಳಿಗ್ಗೆಯೇ ಆಕೆ ಹೊರಟು ನಿಂತಿದ್ದಳು, 'ನಾನು ನಾಳೆ ಬರ್ತೀನಿ..ಎಲ್ಲಿಗೇಂತ ಕೇಳ್ಬೇಡಿ..' ವಸುಮತಿ ಹಾಗೆ ಹೇಳಿ ಹೋದವರು, ಮರುದಿನ ಮಧ್ಯಾಹ್ನದ ಹೊತ್ತಿಗೆ ಮರಳಿದ್ದರು.

'ನಾನು ಅಪೂರ್ವಳ ಮುಂದಿನ ಶಿಕ್ಷಣದ ವ್ಯವಸ್ಥೆ ಮಾಡಿದ್ದೀನಿ..ಅವ್ಳಿನ್ನು ಬೆಂಗಳೂರಿನಲ್ಲಿ ನಮ್ಮ ಪರಿಚಿತರ ಮನೆಯಲ್ಲಿದ್ದುಕೊಂಡು ಓದ್ತಾಳೆ..ಅವ್ರೇ ಎಲ್ಲಾ ವ್ಯವಸ್ಥೆ ಮಾಡ್ತಾರೆ..' ಎಂದಾಗ ಶಂಕರನಿಗೆ, ದೊರಕುವ ಹಣಕ್ಕೆ ಕಲ್ಲು ಬಿತ್ತೆಂದು ಕಳವಳ ಶುರುವಾಗಿತ್ತು.

'ಅವ್ಳಿಗಿನ್ನು ಯಾಕೆ ಓದು..? ಇಲ್ಲೇ ಒಳ್ಳೇ ವರ ನೋಡಿ ಮದ್ವೆ ಮಾಡಿಬಿಟ್ರೆ ಆಯ್ತಪ್ಪಾ..ಅಷ್ಟರ ತನಕ ಮನೇಲಿದ್ದುಕೊಂಡು ಕೆಲಸ ಬೊಗಸೆ ಕಲೀಲಿ..' ಎಂದು ರಾಗವೆಳೆದ.

'ಅದೆಲ್ಲಾ ನಮ್ಮ ಕಾಲಕ್ಕಾಯ್ತು..ಈಗೇನಿದ್ರೂ ಹೆಣ್ಣು ಗಂಡಿನ ಥರ ಸಂಬಳ ತಗೊಂಡು ಸ್ವಾವಲಂಬಿಯಾಗಿ ಬದುಕುವ ಕಾಲ.. ಅಪೂರ್ವ ಕಲಿಕೆಯಲ್ಲಿ ಜಾಣೆ.. ಜಿಲ್ಲೆಗೆ ಹೆಸರು ತಂದಿದ್ದಾಳೆ.. ಅವ್ಳನ್ನು ಎಂಜಿನಿಯರಿಂಗ್‌ಗೆ ಹಾಕ್ತೀನಿ ಅಂತ ಅವ್ರನ್ನು ನೋಡಿಕೊಳ್ಳುವ ಜನ ಮಾತು ಕೊಟ್ಟಿದ್ದಾರೆ..' ಎಂದು ಖಡಕ್ಕಾಗಿ ಉತ್ತರಿಸಿದಾಗ ಶಂಕರ ಕೈ ಹೊಸೆದುಕೊಂಡ. ಅಪೂರ್ವಳಿಗೂ ಮುಂದೆ ಚೆನ್ನಾಗಿ ಕಲಿತು ಆರ್ಥಿಕ ಸ್ವಾವಲಂಬನೆ ಗಳಿಸಬೇಕೆಂಬ ಕನಸಿತ್ತು. ಆದರೆ ಚಿಕ್ಕಮ್ಮನಿದ್ದ ಪರಿಸ್ಥಿತಿಯಲ್ಲಿ ತನ್ನ ಆಸೆ, ಕನಸು ವ್ಯಕ್ತಪಡಿಸಲು ಬಾಯೇ ಬಂದಿರಲಿಲ್ಲ. ಅದಕ್ಕೆ ವಸುಮತಿ ಚಿಕ್ಕಮ್ಮ ಏರ್ಪಾಟು ಮಾಡಿದ್ದೂ ಅವಳಿಗೆ ಖುಷಿಯ ಜೊತೆಗೆ ಸಮಾಧಾನ ತರುವ ಸಂಗತಿಯಾಗಿತ್ತು. ಆದರೆ ಆಕೆ ಬೆಂಗಳೂರಿಗೆ ಹೋಗಿ ಯಾರನ್ನೋ ಒಪ್ಪಿಸಿ ಕಲಿಸುವ ಹೊಣೆಯನ್ನು ಅಪರಿಚಿತರ ತಲೆಗೆ ಹೊರಿಸಿ ಬಂದಿದ್ದು ಮಾತ್ರ ಅವಳಿಗೆ ಮುಜುಗರ ತಂದಿತ್ತು. ಅದನ್ನೇ ಆಕೆಯ ಮುಂದೆ ಅಳುಕುತ್ತ ಅರುಹಿದಾಗ, ಅವಳ ಅಂಜಿಕೆಯನ್ನು ಹೋಗಲಾಡಿಸುವ ಸಲುವಾಗಿ, 'ಅವ್ರು ತುಂಬಾ ಒಳ್ಳೇ ಜನ..ನನ್ಗೆ ದೂರದ ಸಂಬಂಧಿಯಾಗಬೇಕು.. ಪ್ರಭಾಕರರಾಯರು ಅಂತ..ಅವ್ರ ಪತ್ನಿ ವಿಜಯಮ್ಮ.. ಅವ್ರಿಗೆ ಹಿಂದು ಮುಂದು ಯಾರೂ ಇಲ್ಲಾ..ಒಳ್ಳೇ ಹೃದಯವಂತರು..ಅವರ ಬಳಿಗೆ ಹೋಗಿ ನಾನು ನಿನ್ನ ವಿಷ್ಯ ಹೇಳಿಕೊಂಡಾಗ ಒಂದೇ ಮಾತಿಗೆ ಒಪ್ಪಿಕೊಂಡರು..'

'ಒಂದು ಹುಡ್ಗೀಗೆ ವಿದ್ಯಾದಾನ ಮಾಡೋದು ಪುಣ್ಯದ ಕೆಲಸ..ಅವ್ಳಿಗೆ ಒಂದು ಭವಿಷ್ಯವಾಗುತ್ತಲ್ವಾ..?' ಖಂಡಿತಾ ಕರ್ಕೊಂಡು ಬನ್ನಿ.. ನಮ್ಮನೇಲೇ ಮಗು ಇದ್ದುಕೊಂಡು ಕಲೀಲಿ..ಅವ್ಳ ಶಿಕ್ಷಣದ ಪೂರ್ಣ ಹೊಣೆ ನನ್ನದು..' ಅಂತ ಒಪ್ಕೊಂಡು ಬಿಟ್ರು.. ಹಾಸ್ಟೆಲ್ಲು, ಪಿ.ಜಿ. ಎಲ್ಲಾ ಯಾವುದೂ ಬೇಡ..ಊರು ತುಂಬಾ ಹಾಳಾಗಿದೆ..ನಮ್ಮನೇಲೇ ಇದ್ರೆ ನಮ್ಗೂ ಸಮಾಧಾನ ಮತ್ತು ಅವ್ಳಿಗೂ ಕ್ಷೇಮ.. ನಮ್ಗೆ ಮನೇಲಿ ಹೊಸ ಸದಸ್ಯೆ ಬಂದ್ರೆ..ಬದಲಾವಣೆ ಇರುತ್ತೆ.. ಅಂದ್ಬಿಟ್ರು.. ಅವ್ರ ಬಗ್ಗೆ ನೀನೇನೂ ಚಿಂತೆ ಮಾಡ್ಬೇಕಾಗಿದ್ದಿಲ್ಲ..ನಾನು ಆವಾಗಾವಾಗ ಫೋನ್ ಮಾಡ್ತೀನಿ..ಬಂದು ನೋಡ್ಕೊಂಡು ಹೋಗ್ತೀನಿ..' ಎಂದು ಅಭಯ ನೀಡಿದ್ದರು.

ಅಪೂರ್ವಳ ಅರೆಮನಸ್ಸು ಕಂಡು, 'ನೀನು ಇಲ್ಲಿದ್ರೆ, ನಿನ್ನ ಚಿಕ್ಕಪ್ಪ ಯಾರೋ ಕೆಲಸಕ್ಕೆ ಬಾರದವನನ್ನು ಹುಡುಕಿ ತಂದು ನಿನ್ಗೆ ಗಂಟು ಹಾಕ್ತಾರೆ.. ಆನಂತರ ನೀನೂ ನನ್ನ ಹಾಗೇ ಸಂಸಾರದ ಕಷ್ಟ ಕೋಟಲೆಗಳಲ್ಲಿ ಸಿಲುಕಿ ಜೀವನ ಪೂರ್ತಿ ನಲುಗಬೇಕಾಗುತ್ತದೆ.. ಅದಕ್ಕಿಂತಲೂ ನೀನು ಅಪರಿಚಿತರ ಮನೇಲಿ ಇದ್ದು ನಿನ್ನ ಭವಿಷ್ಯ ರೂಪಿಸಿಕೋ.. ಬಡತನ ಹಾಳು ಮಗಳೇ.. ನಮಗೆ ಆಯ್ಕೆಯ ಹಕ್ಕಿಲ್ಲ..ಸಿಕ್ಕಿದ ಸದವಕಾಶವನ್ನು ಬಳಸಿಕೊಂಡು ಮುಂದಿನ ಭವಿಷ್ಯದ ಬಗ್ಗೆ ಗಮನ ಕೊಡು..ಚೆನ್ನಾಗಿ ಕಲಿತು, ನಿನ್ನ ಕಾಲ್ಮೇಲೆ ನೀನು ನಿಲ್ಲು..ನಿನ್ನ ಜೀವನ ಒಂದು ನೆಲೆ ಕಾಣಲಿ..ಒಳ್ಳೇ ಕೆಲಸ ಸಿಕ್ಕಿದ್ರೆ ಒಳ್ಳೆ ಗಂಡು ಮುಂದೆ ಬಂದು ನಿನ್ನ ಮದ್ವೆ ಮಾಡಿಕೊಳ್ತಾನೆ..ನಿನ್ನ ಭವಿಷ್ಯದ ದೃಷ್ಟಿಯಿಂದ ಇದೇ ಸರಿಯಾದ ನಿರ್ಧಾರ..ಯಾರೋ ಪುಣ್ಯಾತ್ಮರು ನಿನ್ನ ಕಲಿಸ್ತೀನಿ ಅಂತ ಮುಂದೆ